<u>ಅಸಲು ದಾವಾ ಸಂಖ್ಯೆಃ **-199/2023**</u> ಪಿ.ಡಬ್ಲ್ಯೂ:**-1**

ದಿನಾಂಕಃ **08-04-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ಪ್ರತಿವಾದಿಗಳು ಗೊತ್ತು. ಪ್ರತಿವಾದಿಗಳು ನನಗೆ ಸೇರಿದ ದಾವಾ ಆಸ್ತಿಯ ನಂ.85 ರಲ್ಲಿ ದಾರಿ ಮಾಡಲು ಬಂದಿದ್ದರಿಂದ ದಾವೆಯನ್ನು ಸಲ್ಲಿಸಿದ್ದೇನೆ. ದಾವಾ ಆಸ್ತಿಯ ವಿಸ್ತೀರ್ಣ 40 ಇಂಟು 106. ದಾವಾ ಆಸ್ತಿಯಲ್ಲಿ ದನುವಿನ ಮನೆ ಇರುತ್ತದೆ. ದಾವಾಆಸ್ತಿಯಲ್ಲಿರುವ ದನುವಿನ ಮನೆ 15 ಇಂಟು 20 ಇರುತ್ತದೆ. ದಾವಾ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ಈ ಹಿಂದೆ ನಾಗರಾಜಪ್ಪರವರ ಜಾಗ ಈಗ ಹಾಲೇಶಪ್ಪನ ಜಾಗ, ಪಶ್ಚಿಮಕ್ಕೆ ಬಸಪ್ಪನ ಜಾಗ, ಉತ್ತರಕ್ಕೆ ಈ ಹಿಂದೆ ಪಿ ಜಿ ರಂಗಪ್ಪ ಈಗ ಬಸವರಾಜಪ್ಪರವರ ಜಾಗ, ದಕ್ಷಿಣಕ್ಕೆ ರಸ್ತೆ. ಪಿ ಜಿ ರಂಗಪ್ಪ 3 ನೇ ಪ್ರತಿವಾದಿಯ ತಂದೆ ಎಂದರೆ ಸರಿ. ಉತ್ತರಕ್ಕೆ ಇರುವ ಬಸವರಾಜಪ್ಪ ಎಂದರೆ 1 ಮತ್ತು 2 ನೇ ಪ್ರತಿವಾದಿ. ದಾವಾ ಆಸ್ತಿಯು ನನ್ನ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ದಾವಾ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನಮ್ಮ ತಂದೆಯವರ ಹೆಸರಿನಲ್ಲಿರುವ ಬಗ್ಗೆ ಆಗಲೀ ಅಥವಾ ನನ್ನ ಅಜ್ಜನ ಹೆಸರಿನಲ್ಲಿರುವ ಬಗ್ಗೆ ಆಗಲೀ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ-1 ರಲ್ಲಿ ಸದರಿ ನಕಲಿನಲ್ಲಿ ಚಕ್ಕುಬಂಧಿಗಳನ್ನು ಖಾತೆದಾರರ ಹೇಳಿಕೆ ಮೇರೆಗೆ ನಮೂದಿಸಲಾಗಿದೆ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-2 ರಲ್ಲಿ ಚಕ್ಕುಬಂಧಿ ನಮೂದಾಗಿಲ್ಲ ಎಂದರೆ ಸರಿ. ನಿಪಿ-3 ರಿಂದ 18 ದಾಖಲೆಗಳನ್ನು ಈ ದಾವೆಗೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರಿಂದ 18 ದಾಖಲೆಗಳಲ್ಲಿ ಚಕ್ಕುಬಂಧಿ ನಮೂದಾಗಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.